# ಅಪಾಯದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ

**ಸುರೇಶ್ ನಾಗಲಮಡಿಕೆ**
ಅಧ್ಯಾಪಕ, ಸಾಹಿತ್ಯ ವಿಮರ್ಶಕ

ಈ ನೆಲಕ್ಕೆ 'ಕರ್ನಾಟಕ' ಎಂಬ ನಾಮಕರಣ ಆಗುವ ಹೊತ್ತಿಗೆ ಆಗಲೇ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನಲ್ಲಿ ಬಹುಮುಖ್ಯ ಚಳವಳಿಗಳು ಜರುಗಿದ್ದವು. ಇವು ಸರ್ಕಾರದ ಆಡಳಿತದ ಮೇಲೂ ಪ್ರಭಾವ ಬೀರಿದ್ದವು. 1970ರ ಆಸುಪಾಸಿನಲ್ಲಿ ದಲಿತ ಸಾಹಿತ್ಯ ಚಳವಳಿ ಕೆಳಜಾತಿಗಳನ್ನು ಎಚ್ಚರಿಸುವ ನಿಟ್ಟಿನಲ್ಲಿ ದೊಡ್ಡಪಾತ್ರ ನಿರ್ವಹಿಸಿತು. ಆದರೆ ಕ್ರಮೇಣ ಇವು ಒಂದು ಉದ್ದೇಶಕ್ಕಾಗಿ ಒಂದುಗೂಡುವಲ್ಲಿ ವಿಫಲವಾದಂತೆ ಕಾಣುತ್ತವೆ. ಚಳವಳಿಗಳಿಗೂ ಮತ್ತು ಆಡಳಿತಕ್ಕೂ ಇದ್ದ ಪೂರಕ ಸಂಬಂಧಗಳು ಮಾಸುತ್ತಿವೆ. ಹಿಂದಿನ ಚಳವಳಿಗಳು ಸಾಹಿತ್ಯವನ್ನು ಒಳಗೊಂಡಂತೆ ಸರ್ಕಾರ ಮತ್ತು ಸಮಾಜದ ವಿದ್ಯಮಾನಗಳಿಗೆ ಸ್ಪಂದಿಸುತ್ತಿತ್ತು. ಆದರೆ ಈಗಿನ ಚಳವಳಿಗಳು ಸರ್ಕಾರವನ್ನು ಎಚ್ಚರಿಸುವ ನಿಟ್ಟಿನಲ್ಲಿ ಸೋಲು ಕಂಡಿವೆ.

ಕನ್ನಡ ಸಾಹಿತ್ಯವನ್ನು ಓದಿಕೊಂಡ ವಿದ್ಯಾರ್ಥಿಗಳು ರಾಜ್ಯ ಮತ್ತು ಭಾಷೆಯ ಜೊತೆ ಕರುಳಬಳ್ಳಿಯ ಸಂಬಂಧ ಬೆಸೆದುಕೊಳ್ಳಬೇಕಿತ್ತು. ಆದರೆ, ಸಾಹಿತ್ಯ ಓದಿಕೊಂಡು ಉದ್ಯೋಗ ಅರಸುವ ವಿದ್ಯಾರ್ಥಿಗಳ ಬಾಳು ಹಸನಾಗದಿರುವುದು ದುರಂತ. ಸಾಹಿತ್ಯದ ಒಳಗೆ ಹೊಗೆಯಾಡುತ್ತಿರುವ ರಾಜಕಾರಣದ ಲಾಭವನ್ನು ಪಕ್ಷ ರಾಜಕೀಯ ಲಾಭ ಪಡೆಯುತ್ತಿದೆ. ಹಾಗಾಗಿ ಪ್ರಾಮಾಣಿಕ ಹೋರಾಟಗಳೂ ಸಮಾಜ ಕೇಂದ್ರಿತ ಬರಹಕ್ಕೆ ಕಸುವು ನೀಡುತ್ತಿಲ್ಲ ಎನ್ನುವ ಅನುಮಾನ ಬರುತ್ತಿದೆ. ಹೀಗಿದ್ದರೂ ಸದ್ಯದ ಕನ್ನಡ ಜಗತ್ತನ್ನು ವಿಸ್ತರಿಸಬಲ್ಲ ದೊಡ್ಡ ಅನುಭವ ಲೋಕ ಬೆಳೆದಿದೆ. ಹೊಸ ತಲೆಮಾರು ಕ್ರಿಯಾಶೀಲವಾಗಿದೆ ಎನ್ನುವುದು ಸಮಾಧಾನದ ವಿಷಯ. ಆದರೆ ಧರ್ಮ, ರಾಜಕಾರಣ ಮತ್ತು ಜಾತಿಗಳನ್ನು ಪ್ರಾಮಾಣಿಕವಾಗಿ ಅರ್ಥ ಮಾಡಿಕೊಳ್ಳಲು ಹೊಸ ತಲೆಮಾರು ಸಿದ್ಧಗೊಂಡಿಲ್ಲ ಅನ್ನಿಸುತ್ತದೆ.

ಸಾಹಿತ್ಯ ವಿಮರ್ಶೆ ಸಮಕಾಲೀನ ಸಂದರ್ಭದಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಸಾಹಿತ್ಯ, ಧರ್ಮ–ರಾಜಕಾರಣವನ್ನು ಒಳಗೊಂಡಂತೆ ಸಮಾಜಮುಖಿ

# ನೃತ್ಯದ ಬಹುತ್ವಕ್ಕೆ ಕರ್ನಾಟಕ ಕನ್ನಡಿ

**ವೈಜಯಂತಿ ಕಾಶಿ**
ಕೂಚಿಪುಡಿ ನೃತ್ಯ ಕಲಾವಿದೆ



ಕರ್ನಾಟಕದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ನೃತ್ಯ ಕ್ಷೇತ್ರದಲ್ಲಿ ಬಹಳ ಬದಲಾವಣೆ ಆಗಿದೆ. ಹಿಂದೆ ಶಾಸ್ತ್ರೀಯ ನೃತ್ಯ ಎಂದರೆ ಅಂದರೆ ಅದು ಬರೀ ಭರತನಾಟ್ಯ ಎಂಬ ಭಾವನೆ ಇತ್ತು. ಹೆಚ್ಚಾಗಿ ಇದ್ದದ್ದು ಕೂಡ ಭರತನಾಟ್ಯವೇ ಆಗಿದ್ದರೂ ನೃತ್ಯದ ಬೇರೆ ಪ್ರಕಾರಗಳೂ ಇದ್ದವು. ಕಥಕ್ ಕಲಾವಿದೆ ವಿದುಷಿ ಮಾಯಾರಾವ್ ಕಥಕ್ ಅನ್ನು ಕರ್ನಾಟಕದಲ್ಲಿ ಜನಪ್ರಿಯಗೊಳಿಸಿದರು. ನೃತ್ಯ ಕೊರಿಯೊಗ್ರಫಿ ಬಂತು. ಕೂಚಿಪುಡಿ, ಒಡಿಸ್ಸಿ, ಮೋಹಿನಿಯಾಟ್ಟಂ ಕೂಡ ಕರ್ನಾಟಕದಲ್ಲಿ ಜನಪ್ರಿಯವಾಯಿತು. ಇದಕ್ಕೆ ಕಾರಣ ಕರ್ನಾಟಕ ಎಲ್ಲ ರಾಜ್ಯಗಳ ಜನ ಬಂದು ನೆಲೆ ನಿಂತಿರುವುದು. ಹೊರರಾಜ್ಯಗಳ ಕಲಾವಿದರು ಬಂದು ಎಲ್ಲ ಶೈಲಿಯ ನೃತ್ಯವನ್ನು ಇಲ್ಲಿ ಪ್ರದರ್ಶನ ಮಾಡಲು, ಕಲಿಸಲು ಶುರು ಮಾಡಿದ್ದೇ, ನಮ್ಮಲ್ಲಿ ನೃತ್ಯದ ಹೊಸ ಪರಂಪರೆಯೇ ಶುರುವಾಯಿತು. ಈಗ ಒಡಿಸ್ಸಿ, ಮಣಿಪುರಿ ನೃತ್ಯಗಳೂ ಬಹಳ ಜನರನ್ನು ಸೆಳೆಯುತ್ತಿವೆ. ಜೊತೆಗೆ ಸಮಕಾಲೀನ ನೃತ್ಯ (ಕಂಟೆಂಪರರಿ ಡ್ಯಾನ್ಸ್) ಹೆಚ್ಚು ಹೆಚ್ಚು ಯುವಜನರನ್ನು ಆಕರ್ಷಿಸುತ್ತಿದೆ.

ನಾವು ಎಲ್ಲ ನೃತ್ಯ ಶೈಲಿಗಳನ್ನೂ ಖುಷಿಯಿಂದ ಸ್ವೀಕರಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ನಾವು ಒಂದು ರೀತಿಯಲ್ಲಿ ಧಾರಾಳ ಮನೋಭಾವದವರು. ಯಾವ ಶೈಲಿಯ ಕಲಾವಿದರು ಬಂದರೂ ಕೈಬೀಸಿ ಕರೀತೀವಿ. ಹೀಗಾಗಿ ಭರತನಾಟ್ಯದ ಜೊತೆಗೆ ಎಲ್ಲ ಪ್ರಕಾರಗಳ ನೃತ್ಯವೂ ನಮ್ಮಲ್ಲಿ ಸ್ಥಾನ ಪಡೆದುಕೊಂಡಿವೆ. ಕಲಾವಿದರಿಗೆ ಅವಕಾಶವೂ ಸಿಗುತ್ತಿದೆ. ಬಹುಶಃ ಬೇರೆ ಯಾವ ರಾಜ್ಯಗಳಲ್ಲಿಯೂ ನಮ್ಮಷ್ಟು ನೃತ್ಯ ವೈವಿಧ್ಯ ಇರಲಿಕ್ಕಿಲ್ಲ. ಹಿಂದೆ ಗುರು–ಶಿಷ್ಯ ಪರಂಪರೆಯಲ್ಲಿ ನೃತ್ಯ ಅಭ್ಯಾಸ ಮಾಡುತ್ತಿದ್ದರು. ಈಗ ನೃತ್ಯವನ್ನು ಅಕಡೆಮಿಕ್ ಆಗಿ ಕಲಿಯುವ ಅವಕಾಶ ಸಿಗುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರಿನ ರೇವಾ ವಿವಿ, ಜೈನ್ ಕಾಲೇಜು, ಮೌಂಟ್ ಕಾರ್ಮೆಲ್ ಕಾಲೇಜು ಮುಂತಾದ ಕಡೆಗಳಲ್ಲಿ 'ಪರ್ಫಾರ್ಮಿಂಗ್ ಆರ್ಟ್ಸ್' ಎಂದೇ ಒಂದು ವಿಶೇಷ ವಿಭಾಗ ಇದ್ದು, ನೃತ್ಯವೂ ಸೇರಿದಂತೆ ಎಲ್ಲ ರೀತಿಯ ಲಲಿತಕಲೆಗಳನ್ನು ಶಾಸ್ತ್ರ, ಲಕ್ಷಣ ಹಾಗೂ ಪ್ರಾಯೋಗಿಕವಾಗಿ ಕಲಿಯುವ ಅವಕಾಶ ವಿದ್ಯಾರ್ಥಿಗಳಿಗೆ ಈಗ ಸಿಗುತ್ತಿದೆ.

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಕಲಾ ವಿಮರ್ಶೆ ಮಾಡಲೆಂದೇ ಒಂದು ಕೋರ್ಸ್ ಆರಂಭಿಸಲಾಗಿದೆ. ಆಸಕ್ತರು ಬಿಎ, ಪಿಹೆಚ್‌.ಡಿ. ಕೂಡ ಮಾಡಬಹುದು. 'ಆರ್ಟ್ ಕಲೆಕ್ಟಿವ್' ವಿಭಾಗದಲ್ಲಿ ಸಂಗೀತ, ಗಿಟಾರ್‌ನಂತಹ ವಾದ್ಯ ಸಂಗೀತ, ರಂಗಭೂಮಿ, ಕಂಟೆಂಪರರಿ ಡ್ಯಾನ್ಸ್ ಅನ್ನು ಶುರು ಮಾಡಲಾಗಿದೆ. ಹೀಗೆ ಕಾಲೇಜು ಹಂತದಲ್ಲಿ ಮಕ್ಕಳಲ್ಲಿ ಕಲೆಯ ಬಗ್ಗೆ ಆಸಕ್ತಿ ಮೂಡಿಸುತ್ತಿರುವುದು ಒಂದು ರೀತಿಯಲ್ಲಿ 'ಪಾಸಿಟಿವ್ ಚೇಂಜ್' ಎನ್ನಬಹುದು.

ಸಮಕಾಲೀನ ನೃತ್ಯದತ್ತ ಯುವಜನರ ಆಸಕ್ತಿ ಹೆಚ್ಚಾಗಿದೆ. ವಿದೇಶಿ ಕಂಪನಿಗಳೂ ಇದಕ್ಕೇ ಹೆಚ್ಚು ಉತ್ತೇಜನ ಕೊಡುತ್ತಿವೆ. ಇದರಿಂದ ಶಾಸ್ತ್ರೀಯ ನೃತ್ಯ ಹಿಂದೆ ಸರಿಯುತ್ತಾ ಇದೆಯೇನೋ ಎಂಬ ಆತಂಕ ಶುರುವಾಗಿದೆ. ಆದರೆ ದೂರದರ್ಶನ ಮಾತ್ರ ಶಾಸ್ತ್ರೀಯ ಕಲೆಗೆ ಉತ್ತೇಜನ ನೀಡುತ್ತಲೇ ಇದೆ. ಹೀಗಾಗಿ ದೂರದರ್ಶನವನ್ನು 'ಸ್ಟ್ರಾಂಗ್ ಸಪೋರ್ಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್' ಎಂದು ಕರೆಯಬಹುದು.

